# ವಿ ಟ್ರಾನ್ಸ್‌ಫರ್ ನಿಷೇಧ
## ಇಲ್ಲಿವೆ ಪರ್ಯಾಯ ಆ್ಯಪ್‌ಗಳು

■ **ಶಶಿಕುಮಾರ್ ಸಿ.**

ರಾಷ್ಟ್ರೀಯ ಭದ್ರತೆಗೆ ಧಕ್ಕೆಯಾಗುವ ಕಾರಣವೊಡ್ಡಿ ದೊಡ್ಡ ಗಾತ್ರದ ಸಾಫ್ಟ್‌ವೇರ್ ಫೈಲ್‌ಗಳನ್ನು ಆನ್‌ಲೈನ್ ಮೂಲಕ ಟ್ರಾನ್ಸ್‌ಫರ್ ಮಾಡಲು ಬಳಸುತ್ತಿದ್ದ 'ವಿ ಟ್ರಾನ್ಸ್‌ಫರ್' ಸಾಫ್ಟ್‌ವೇರ್ ಅನ್ನು ಕೇಂದ್ರ ಸರ್ಕಾರದ ದೂರಸಂಪರ್ಕ ಇಲಾಖೆಯು ನಿಷೇಧಗೊಳಿಸಿದೆ.

ಹೆಚ್ಚಿನ ಗಾತ್ರದ ಫೈಲ್‌ಗಳನ್ನು ರವಾನಿಸಲು 'ವಿ ಟ್ರಾನ್ಸ್‌ಫರ್' ತಂತ್ರಾಂಶವನ್ನು ಹೆಚ್ಚಿನ ಮಂದಿ ಅವಲಂಬಿಸಿದ್ದರು. ಇದರಿಂದಾಗಿ ದೊಡ್ಡ ಗಾತ್ರದ ಫೈಲ್‌ಗಳನ್ನು ಕಳುಹಿಸುವುದು ಸುರಕ್ಷಿತವಲ್ಲ ಮತ್ತು ಈ ವಿಧಾನದಿಂದ ಮಾಹಿತಿ ಸೋರಿಕೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆಯು ತಿಳಿಸಿದ್ದು, ಅದಕ್ಕಿಂತ ಮಿಗಿಲಾಗಿ ರಾಷ್ಟ್ರೀಯ ಹಿತಾಸಕ್ತಿ ಮತ್ತು ಸಾರ್ವಜನಿಕ ಹಿತಾಸಕ್ತಿ ಕಾರಣವನ್ನು ನೀಡಿದೆ. ಆದರೆ, ಆ ಬಗ್ಗೆ ನಿರ್ದಿಷ್ಟವಾಗಿ ಸ್ಪಷ್ಟಪಡಿಸಿಲ್ಲ. ಜೊತೆಗೆ ಈ ತಂತ್ರಾಂಶಗೆ ಸಹಕಾರ ನೀಡುವುದನ್ನು ಸ್ಥಗಿತಗೊಳಿಸುವಂತೆ ಇಂಟರ್‌ನೆಟ್ ಪೂರೈಸುವ ಸಂಸ್ಥೆಗಳಿಗೆ ನೋಟಿಸ್ ಕಳುಹಿಸಿದೆ.

ವಿಟ್ರಾನ್ಸ್‌ಫರ್ ಮೂಲಕ 2 ಜಿಬಿವರೆಗಿನ ಫೈಲ್‌ಗಳನ್ನು ಆನ್‌ಲೈನ್‌ನಲ್ಲಿ ಉಚಿತವಾಗಿ ಕಳುಹಿಸಬಹುದಿತ್ತು. ಅದಕ್ಕಿಂತ ಹೆಚ್ಚಿನ ಮತ್ತು 20 ಜಿಬಿವರೆಗಿನ ಫೈಲ್‌ಗಳನ್ನು ಕಳುಹಿಸಲು ವಿವಿಧ ಹಂತದ ಶುಲ್ಕವನ್ನು ವಿಧಿಸಲಾಗಿತ್ತು. ಚಂದಾದಾರಿಕೆ ಸೌಲಭ್ಯವನ್ನು ಆ ಕಂಪನಿಯು ಒದಗಿಸಿತ್ತು. 'ವಿ ಟ್ರಾನ್ಸ್‌ಫರ್'ಗಷ್ಟೇ ದೂರಸಂಪರ್ಕ ಇಲಾಖೆಯು ನಿಷೇಧವೇರಿದ್ದು, ಅದರಂತೆ ಕಾರ್ಯನಿರ್ವಹಿಸುವ ಗೂಗಲ್ ಡ್ರೈವ್, ಸ್ಮಾಶ್, ಫೈರ್‌ಫಾಕ್ಸ್ ಸೆಂಡ್, ಸೆಂಡ್ ಎನಿವೇರ್, ಸರ್ಜ್‌ಸೆಂಡ್, ಡ್ರಾಪ್‌ಬಾಕ್ಸ್ ಮತ್ತು ಇನ್ನಿತರ ಆ್ಯಪ್‌ಗಳನ್ನು ಪರ್ಯಾಯವಾಗಿ ಜನರು ಬಳಸಬಹುದು.

### ಗೂಗಲ್ ಡ್ರೈವ್

ವಿ ಟ್ರಾನ್ಸ್‌ಫರ್‌ಗೆ ಪರ್ಯಾಯವೆಂದರೆ ಅದು ಗೂಗಲ್ ಡ್ರೈವ್. 15ಜಿಬಿ ವರೆಗಿನ ಕ್ಲೌಡ್ ಸ್ಟೋರೆಜ್ ಸೌಲಭ್ಯ ಇದರಲ್ಲಿದ್ದು, ಜೊತೆಗೆ ಅಷ್ಟೇ ಗಾತ್ರದ ಫೈಲ್‌ಗಳನ್ನು ರವಾನಿಸುವ ಆಯ್ಕೆಯೂ ಇದೆ. ಆದರೆ, ಇದನ್ನು ಬಳಸು ಬಳಕೆದಾರರ ಬಳಿ ಗೂಗಲ್ ಅಕೌಂಟ್ ಇರಬೇಕು. ಲಿಂಕ್ ಮತ್ತು ಇಮೇಲ್ ಮೂಲಕ ಫೈಲ್ ಕಳುಹಿಸುವ ಆಯ್ಕೆಯನ್ನು ಹೊಂದಿದೆ.

### ಸ್ಮಾಶ್

ಆನ್‌ಲೈನ್ ಮೂಲಕ ದೊಡ್ಡ ಗಾತ್ರದ ಫೈಲ್‌ಗಳನ್ನು 'ಸ್ಮಾಶ್' ತಂತ್ರಾಂಶದ ಮೂಲಕ ಸರಾಗವಾಗಿ ಕಳುಹಿಸಬಹುದು. ಇದರಲ್ಲಿ ಫೈಲ್‌ಗಳ ಗಾತ್ರಕ್ಕೆ ಮಿತಿ ಇಲ್ಲ. ಎಷ್ಟೇ ದೊಡ್ಡದಾದ ಫೈಲ್‌ಗಳಿದ್ದರೂ ಅವುಗಳನ್ನು 'ಸ್ಮಾಶ್' ಮೂಲಕ ಕಳುಹಿಸಬಹುದು. ಇದಕ್ಕೆ ಪಾಸ್‌ವರ್ಡ್ ಸೇವೆಯೂ ಇದ್ದು, ಇದರ ಉಚಿತ ವರ್ಶನ್‌ನಲ್ಲಿ 14 ದಿನಗಳ ವರೆಗೆ ಫೈಲ್‌ಗಳು ಲಭ್ಯ ಇರುತ್ತವೆ. ಫೈಲ್‌ಗಳ ಪ್ರಿವ್ಯೂ ಆಯ್ಕೆಯೂ ಇದರಲ್ಲಿದೆ. ಪ್ರೀಮಿಯಂ ವರ್ಶನ್‌ನ ಬೆಲೆ 5 ಡಾಲರ್ ಇದ್ದು, ವರ್ಷವಿಡಿ ಇದರಲ್ಲಿ ಫೈಲ್‌ಗಳನ್ನು ಕಳುಹಿಸಬಹುದು. ಜೊತೆಗೆ ಬ್ಯಾಕ್‌ಅಪ್ ಫೈಲ್ ಸೇವೆ ಸಹ ಲಭ್ಯ.

### ಫೈರ್‌ಫಾಕ್ಸ್ ಸೆಂಡ್

1 ಜಿಬಿವರೆಗಿನ ಗಾತ್ರದ ಫೈಲ್‌ಗಳನ್ನು ಈ ಆ್ಯಪ್‌ಗೆ ಸೈನ್ ಇನ್ ಆಗದೆಯೇ ಕಳುಹಿಸಬಹುದು. ಬಳಕೆದಾರರು ಈ ಆ್ಯಪ್‌ಗೆ ಸೈನ್ ಇನ್ ಆದ ಬಳಿಕ 2.5 ಜಿಬಿ ಗಾತ್ರದವರೆಗಿನ ಫೈಲ್‌ಗಳನ್ನು ಉಚಿತವಾಗಿ ಕಳುಹಿಸಬಹುದು. ಆ್ಯಪ್ ಮೂಲಕ ಕಳುಹಿಸಿದ ಫೈಲ್‌ಗಳು ಸ್ವಯಂಚಾಲಿತವಾಗಿ ಡಿಲೀಟ್ ಆಗುವ ಆಯ್ಕೆಯೂ ಇದರಲ್ಲಿದೆ. ಸುರಕ್ಷತೆಗೆ ಹೆಚ್ಚಿನ ಆದ್ಯತೆಯನ್ನು ಇದು ನೀಡಿದೆ.

### ಸೆಂಡ್ ಎನಿವೇರ್

'ಸ್ಮಾಶ್' ಆ್ಯಪ್‌ನಂತೆಯೇ ಇದರಲ್ಲಿಯೂ ಅನಿಯಮಿತ ಗಾತ್ರದ ಫೈಲ್‌ಗಳನ್ನು ಕಳುಹಿಸಬಹುದು. ಚಿತ್ರಗಳು, ಧ್ವನಿ ಸಂದೇಶ, ಡಾಕ್ಯುಮೆಂಟ್ ಫೈಲ್‌ಗಳನ್ನು ಉಚಿತವಾಗಿ ರವಾನಿಸಬಹುದು. ಇದರ ಸೇವೆಯೂ ಬಳಕೆಗೆ ಸುಲಭವಾಗಿದ್ದು, ಲಿಂಕ್ ಅಥವಾ ಇಮೇಲ್ ಮೂಲಕ ನೇರವಾಗಿ ಫೈಲ್‌ಗಳನ್ನು ಕಳುಹಿಸಬಹುದು.

### ಸರ್ಜ್ ಸೆಂಡ್

ಸರ್ಜ್ ಸೆಂಡ್ ಫ್ರೀ ವರ್ಶನ್‌ನಲ್ಲಿ 3 ಜಿಬಿವರೆಗಿನ ಫೈಲ್‌ಗಳನ್ನು ಅಪ್‌ಲೋಡ್ ಮಾಡಬಹುದು. ಗಾತ್ರದ ಮಿತಿಯು 50 ಜಿಬಿ ಇದ್ದು, ಸ್ಟೋರೆಜ್ ಸಾಮರ್ಥ್ಯವು 250ಜಿಬಿ ವರೆಗೆ ಇದೆ. ■


ॐ ✝ ☪ ಸರ್ವೇಜನಃ ಸುಖಿನೋ ಭವಂತುಃ ॐ ✝ ☪

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು



ಶ್ರೀ ಸಾಯಿಬಾಬ ಉಪಾಸಕರು

ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ

ವಶೀಕರಣ ಮಾಂತ್ರಿಕರು

ಶ್ರೀಯುತ ಪರಶುರಾಮ್ ಗುರೂಜಿ

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ

ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ

ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

9620444460

ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ

ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.

ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.